ಶ್ರೀ ಬಿ. ಎಲ್. ಗೌಡ.—ನಾನು ಆಫೀಷಿಯಲ್ ರಿಪೋರ್ಟ್ ಪ್ರಕಾರ ಹೇಳಿದ್ದೇನೆ. ನೀವು ಇಲ್ಲವೆಂದು ಹೇಳುತ್ತೀರಿ. ನಮ್ಮ ಅಧಿಕಾರಿಗಳಿಗೆ ಅದನ್ನು ಕಳಿಸಿ ತನಿಖೆ ನಡೆಸುವುದಕ್ಕೆ ಅವಕಾಶ ಮಾಡಿಕೊಡುತ್ತೇವೆ.

ಶ್ರೀ ಎಂ. ನಾಗಪ್ಪ.—ತಮ್ಮ ಉತ್ತರದಲ್ಲಿ ಯಾವ ಯಾವ ವರ್ಷದಲ್ಲಿ ಎಷ್ಟೆಷ್ಟು ಏನೇನು ಉತ್ಪತ್ತಿಯಾಗಿದೆ ಎಂದು ಪರಿಶಿಷ್ಟದಲ್ಲಿ ಕೊಟ್ಟಿದ್ದೀರಿ. ಈಗಾಗಲೇ ತಾವು ಹೇಳಿದ್ದೀರಿ—ಹುರುಪಿನ ತರುಣರು ಬಂದಿದ್ದಾರೆ ಎಂದು. ಆ ತರುಣರು ಯಾವಾಗ ಆರಿಸಿ ಬಂದರು, ಅವರು ಎಲ್ಲಿ ಪ್ರಗತಿ ತೋರಿಸಿದ್ದಾರೆ? ಪ್ರಗತಿ ಇಳಿಮುಖವಾಗುತ್ತಾ ಇದೆ. ಅಂದ ಮೇಲೆ ಇದರ ಬಗ್ಗೆ ಕ್ರಮ ತೆಗೆದು ಕೊಳ್ಳುತ್ತೀರಾ?

ಶ್ರೀ ಬಿ. ಎಲ್. ಗೌಡ.—ನಾನಾಗಲೇ ತಿಳಿಸಿದ್ದೇನೆ. 1966-67, 1967-68ರಲ್ಲಿ ಪ್ರಗತಿ ಸ್ಥಗಿತವಾಗಿತ್ತು. ನಂತರ ಹೊಸಬರು ಚುನಾಯಿತರಾಗಿದ್ದಾರೆ. ಚುನಾವಣೆ ಆದ ಮೇಲೆ ಉತ್ಪಾದನೆ ಪ್ರಾರಂಭವಾಗಿದೆ. ಮುಂದೆ ನೋಡಬೇಕಾಗಿದೆ.

ಶ್ರೀ ಸಿ. ಕೆ. ರಾಜಯ್ಯ ಶೆಟ್ಟಿ.—ಅಲ್ಲಿ ಖಾದಿ ರಿಬೇಟ್ ಮುಂತಾದುವುಗಳಲ್ಲಿ ಕೆಲವು ಸುಳ್ಳು ಲೆಕ್ಕ ತೋರಿಸಿ ನಷ್ಟವಾಗಿದೆಯೇ?

ಶ್ರೀ ಬಿ. ಎಲ್. ಗೌಡ.—ಅದು ಸತ್ಯಕ್ಕೆ ದೂರವಾದ ಮಾತು.

ಶ್ರೀ ಅಜೀಜ್ ಶೇಠ್.—ಪ್ರಶ್ನೆ ಕೇಳಿರುವುದು ಈಗತಾನೆ ತಮ್ಮ ಪಕ್ಷಕ್ಕೆ ಸೇರಿದ ಸದಸ್ಯರು. ನೀವು ತಮ್ಮ ಅಧಿಕಾರವರ್ಗದವರನ್ನು ನಂಬುತ್ತೀರಾ ಅಥವಾ ತಮ್ಮ ಪಕ್ಷದ ಸದಸ್ಯರನ್ನು ನಂಬುತ್ತೀರಾ?

ಶ್ರೀ ಬಿ. ಎಲ್. ಗೌಡ.—ಯಾವ ಪಕ್ಷದವರು ಇದ್ದರೂ, ಇರುವ ಅಂಕಿಅಂಶಗಳನ್ನು ಹೇಳ ಬೇಕಾಗುತ್ತದೆ, ಹೇಳುತ್ತೇನೆ.

Sri B. P. GANGADHAR.—The Chair is showing discrimination. Do not think that I am all alone and you can play in your own way. This sort of discrimination is against the dignity of the House.

Mr. DEPUTY SPEAKER.—If the hon. Member goes on disturbing, I will have to enforce the rules. No discrimination is being shown to any Member of this House. Next, question No. 43 by hon. Member Sri N. A. Channe Gowda.

Appointment of Vice-Chancellor of the Mysore and Bangalore Universities

43. Sri N. A. CHANNE GOWDA (Pandavapura).—

Will the Minister for Education be pleased to state :—

whether there is any proposal to evolve a commom procedure in the matter of appointment of the Vice-Chancellors of the Mysore and Bangalore Universities ?

Sri K. V. SHANKARA GOWDA (Minister for Education).—

No.

ಶ್ರೀ ಎನ್. ಎ. ಚನ್ನೇಗೌಡ.—ಮೈಸೂರು ಮತ್ತು ಬೆಂಗಳೂರು ವಿಶ್ವವಿದ್ಯಾನಿಲಯದ ಉಪಕುಲಪತಿಗಳನ್ನು ಯಾವ ನಿಯಮದ ಮೇಲೆ ನೇಮಿಸುತ್ತೀರಿ?

ಶ್ರೀ ಎನ್. ಎಂ. ಕೆ. ಸೋಗಿ.—ಮೈಸೂರು ವಿಶ್ವವಿದ್ಯಾನಿಲಯದ ಉಪಕುಲಪತಿಗಳನ್ನು ನೇರವಾಗಿ ಚಾನ್ಸಲರ್ ಅವರು ನೇಮಕಮಾಡುತ್ತಾರೆ. ಬೆಂಗಳೂರು ವಿಶ್ವವಿದ್ಯಾನಿಲಯದ ಉಪಕುಲಪತಿಗಳನ್ನು ಮೂರು ಜನ ತಜ್ಞರಿಂದ ಕೂಡಿದಂಥ ಸಿಂಡಿಕೇಟಿನ ಶಿಫಾರಸ್ಸಿನ ಮೇಲೆ ನೇಮಕ ಮಾಡುತ್ತಾರೆ.

ಶ್ರೀ ಎನ್. ಎ. ಚನ್ನೇಗೌಡ.—ಈ ಎರಡು ವಿಶ್ವವಿದ್ಯಾನಿಲಯಗಳು ಒಂದೇ ರಾಜ್ಯದಲ್ಲಿದ್ದರೂ ಒಂದು ವಿಶ್ವವಿದ್ಯಾನಿಲಯದ ಉಪಕುಲಪತಿಗಳನ್ನು ನೇರವಾಗಿಯೂ ಇನ್ನೊಂದು ವಿಶ್ವವಿದ್ಯಾನಿಲಯದ ಉಪಕುಲಪತಿಗಳನ್ನು ಚುನಾವಣೆಯ ಮೂಲಕ ನೇಮಿಸುವುದರಿಂದ ಅವರ ಕರ್ತವ್ಯ ನಿರ್ವಹಣೆಗೆ ತೊಂದರೆಯಾಗುವುದಿಲ್ಲವೇ ?

ಶ್ರೀ ಎನ್. ಎಂ. ಕೆ. ಸೋಗಿ.—ಅಷ್ಟೆ ಅಲ್ಲ. ತಮ್ಮದೇ ಅದಂಥ ಒಂದು ವೈವಿಧ್ಯತೆಯ ಪದ್ಧತಿ ಇರಬೇಕೆಂದು ಕೆಲವರು ಹೇಳುತ್ತಿದ್ದಾರೆ. ಹೀಗಿರುವಾಗ ಅದಗಲ್ಲಿ ಏಕರೂಪವಾದ ಆಡಳಿತ ಪದ್ಧತಿ ತರುವುದು ಸರಿಯೇ ಅಥವಾ ಬೇಡವೇ ಎಂಬುದು ಇನ್ನೂ ತಜ್ಞರ ಹಾಗೂ ಸರ್ಕಾರದ ಪರಿಶೀಲನೆಯಲ್ಲಿದೆ.

ಶ್ರೀ ಚಿಕ್ಕೇಗೌಡ.—ಎಲ್ಲಾ ಉಪಕುಲಪತಿಗಳನ್ನು ಒಂದೇ ರೀತಿಯಾಗಿ ನೇಮಿಸುವುದಕ್ಕೆ ತಮಗಿರುವ ಕಷ್ಟವೇನು ? ಅನೇಕ ವಿಶ್ವವಿದ್ಯಾನಿಲಯಗಳಲ್ಲಿ ಏಕರೂಪತೆ ತಂದಿರುವುದನ್ನು ನಾವು ಪತ್ರಿಕೆಗಳಲ್ಲಿ ಓದಿರುವುದು ನಿಜವಲ್ಲವೇ ? ಆದ್ದರಿಂದ ಈ ರಾಜ್ಯದಲ್ಲಿರುವ ಎಲ್ಲಾ ವಿಶ್ವವಿದ್ಯಾನಿಲಯಗಳಲ್ಲಿಯೂ ಕಾನೂನುಗಳನ್ನು ಏಕರೂಪದಲ್ಲಿ ತರುವುದಕ್ಕೆ ಸರ್ಕಾರಕ್ಕೆ ಇರುವ ಕಷ್ಟಗಳೇನು ?

ಶ್ರೀ ಎನ್. ಎಂ. ಕೆ. ಸೋಗಿ.—ವಿಶ್ವವಿದ್ಯಾನಿಲಯಗಳ ಆಡಳಿತದಲ್ಲಿ ಏನಾದರೂ ಸುಧಾರಣೆಯಾಗಬೇಕಾದರೆ, ಮೊದಲು ತಜ್ಞರ ಅಭಿಪ್ರಾಯವನ್ನು ತೆಗೆದುಕೊಳ್ಳಬೇಕು. ಈ ಮಧ್ಯೆ ಎಜುಕೇಷನ್ ಕಮಿಷನ್ನಿನವರು ಮಾಡಿರತಕ್ಕ ಶಿಫಾರಸ್ಸುಗಳನ್ನು ಮತ್ತು ತಜ್ಞರು ಮಾಡಿರುವ ಸೂಚನೆಗಳನ್ನು ಪರಿಗಣಿಸಬೇಕಾಗಿದೆ. ಇದರ ಬಗ್ಗೆ ಏಕರೂಪವಾದ ಪದ್ಧತಿಯನ್ನು ಜಾರಿಗೆ ತರಬೇಕೆಂದು ಯೂನಿವರ್ಸಿಟಿ ಎಜುಕೇಷನಲ್ ಇಂಟಗ್ರೇಷನ್ ಕಮಿಟಿಯೆಂದು ಮಾಡಿದ್ದಾರೆ. ಆದ್ದರಿಂದ ಇದರ ಬಗ್ಗೆ ಏಕರೂಪದಲ್ಲಿ ಕಾನೂನು ತರುವುದು ಸೂಕ್ತವೇ ಏನು ಎಂಬುದು ಸರ್ಕಾರದ ಪರಿಶೀಲನೆಯಲ್ಲಿದೆ.

ಶ್ರೀ ಎಚ್. ಬಿ. ಜ್ವಾಲನಯ್ಯ.—ಈ ಎರಡು ವಿಶ್ವವಿದ್ಯಾನಿಲಯಗಳ ಉಪಕುಲಪತಿಗಳನ್ನು ಆರಿಸುವುದರಲ್ಲಿ ಚಾನ್ಸಲರ್ ಅವರು ಏನಾದರೂ ಸಲಹೆ ಕೊಟ್ಟರೆ, ಆ ಒಂದು ಸಲಹೆಯನ್ನು ತಿರಸ್ಕಾರ ಮಾಡುವ ಸಂದರ್ಭದಲ್ಲಿ ಸರ್ಕಾರ ಏನಾದರೂ ಹಕ್ಕನ್ನು ಪಡೆದಿದೆಯೇ ?

ಶ್ರೀ ಎನ್. ಎಂ. ಕೆ. ಸೋಗಿ.—ಚಾನ್ಸಲರ್ ಅವರು ಸಲಹೆಮಾಡುವುದಿಲ್ಲ. ಅವರನು ನೇಮಕ ಮಾಡುತ್ತಾರೆ.

ಶ್ರೀ ಎಚ್. ಬಿ. ಜ್ವಾಲನಯ್ಯ—ಇದರಲ್ಲಿ ಸರ್ಕಾರದ ಧೋರಣೆ ಏನೆಂದು ಕೇಳಿದ್ದಕ್ಕೆ ಉತ್ತರದಲ್ಲಿ ಏನೂ ಇಲ್ಲವೆಂದು ಹೇಳಿದಿರಿ. ಹಾಗಾದರೆ ಈ ಎರಡು ಹುದ್ದೆಗಳನ್ನು ಭರ್ತಿಮಾಡುವ ಕಾಲದಲ್ಲಿ ಸರ್ಕಾರದ ಕೈವಾಡ ಯಾವುದೂ ಇಲ್ಲವೇ ?

ಶ್ರೀ ಎನ್. ಎಂ. ಕೆ. ಸೋಗಿ.—ಇಲ್ಲ. ಅದನ್ನು ಚಾನ್ಸಲರ್ ಅವರು ಮಾಡುತ್ತಾರೆ. ಮಾಡರ್ ಆಕ್ಟ್ ಫಾರ್ ಯೂನಿವರ್ಸಿಟೀಸ್ ಎಂಬುದಾಗಿ ಇಡೀ ಭಾರತದೇಶಕ್ಕೇ ಅನ್ವಯವಾಗಿದೆ. ಅದರ ಪ್ರಕಾರ ಈ ಸಂಸ್ಥೆಗಳು ಕೆಲಸಮಾಡುತ್ತಿವೆ ಚಾನ್ಸಲರಿಗೆ ಇದರ ಬಗ್ಗೆ ಸರ್ಕಾರ ಉಪಯುಕ್ತವಾದ ಸಲಹೆಗಳನ್ನು ಕೊಡಬಹುದು.

ಶ್ರೀ ಎನ್. ಎ. ಚನ್ನೇಗೌಡ.—ಹಿಂದೆ ಈ ಬಗ್ಗೆ ಏಕರೂಪವಾದ ಶಾಸನವನ್ನು ಜಾರಿಗೆ ತರುತ್ತೇವೆಂದು ಶಿಕ್ಷಣ ಮಂತ್ರಿಗಳು ಹೇಳಿದ್ದರು. ಅದಕ್ಕೇನು ಗಮನಕೊಟ್ಟಿದ್ದೀರಿ ?

ಶ್ರೀ ಎನ್. ಎಂ. ಕೆ. ಸೋಗಿ.—ಅದಿನ್ನೂ ಸರ್ಕಾರದ ಪರಿಶೀಲನೆಯಲ್ಲಿದೆ.

ಶ್ರೀ ಎಂ. ಎಸ್. ಕೃಷ್ಣನ್.—ಮೈಸೂರಿನಲ್ಲಿ ಚಾನ್ಸಲರ್ ಅವರು ಅಲ್ಲಿನ ವಿಶ್ವವಿದ್ಯಾನಿಲಯದ ಉಪಕುಲಪತಿಗಳನ್ನು ನೇಮಕ ಮಾಡುವುದು ಅದು ಒಂದು ತಮ್ಮದೇ ಅದಂಥ ವೈವಿಧ್ಯತೆಯ ಪದ್ಧತಿ, ಅದನ್ನು ಅವರು ಅಲ್ಲಿ ಉಪಯೋಗಿಸಿಕೊಳ್ಳುವ ಅಧಿಕಾರವಿದೆ ಎಂದು ಮಂತ್ರಿಗಳು ಹೇಳಿದರು. ಹಳೆಯ ಕಾಲದ ಪದ್ಧತಿಗೆ ವೈವಿಧ್ಯತೆ ಎಂಬುದಾಗಿ ಹೇಳುವುದು ಈಗಿನ ಕಾಲದಲ್ಲಿ ಅದರಲ್ಲಿಯೂ ಪ್ರಜಾಪ್ರಭುತ್ವ ಪದ್ಧತಿಯಲ್ಲಿ ಸರಿಹೋಗುತ್ತದೆಯೇ ? ಸರ್ಕಾರಕ್ಕೆ ಅದನ್ನೇ ಈಗ ಉಳಿಸುವ ಅಭಿಪ್ರಾಯ ಇದೆಯೇ ?

Sri N. M. K. SOGI.—I meant that there are different types of administrations in various Universities of our State. I did not mean only the Mysore University.

ಶ್ರೀ ಬಿ. ಪಿ. ಗಂಗಾಧರ್.—ಈಗ ಬೇರೆ ಬೇರೆ ಯೂನಿವರ್ಸಿಟಿಗಳಲ್ಲಿ ಬೇರೆ ಬೇರೆ ತರಹದಲ್ಲಿ ಉಪಕುಲಪತಿಗಳನ್ನು ಚುನಾವಣೆ ಮಾಡುವುದಕ್ಕೆ ಏರ್ಪಾಡು ಮಾಡಿರುವುದರಿಂದ ನಿಜವಾಗಿಯೂ ಜೆನ್ಯೂಯಿನ್ ಪೀಪಲ್‌ಗೆ 15 ವರ್ಷಗಳಿಂದ ಪ್ರೊಫೆಸರ್‌ಗಿರಿ ಮಾಡಿರುವಂತಹವರಿಗೆ ಅದರಲ್ಲಿಯೂ ಪಿ. ಎಚ್. ಡಿ, ಪಾಸ್ ಮಾಡಿಕೊಂಡು ಎಷ್ಟೋ ವರ್ಷಗಳ ಕಾಲ ಯೋಮನ್ ಸರ್ವಿಸ್ ಮಾಡಿರುವಂತಹವರಿಗೆ ಅಲ್ಲಿ ಅವಕಾಶ ಸಿಗುತ್ತಾ ಇಲ್ಲ. ಇದರಿಂದ ಕಮ್ಯೂನಲ್ ಬಯಾಸಿಗೆ ಅವಕಾಶ ವಾಗಿದೆ. ಇದು ನಿಜವೇ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಮಾನ್ಯ ಸದಸ್ಯರು ಹೇಳಿದ್ದು ಸರಿಯುಲ್ಲ. ನಮ್ಮ ಸರ್ಕಾರದಿಂದ ನೇಮಕವಾದಂಥ ಯೂನಿವರ್ಸಿಟಿ ಇಂಟಗ್ರೇಷನ್ ಕಮಿಟಿ ಎಂದಿದೆ. ಅದರಲ್ಲಿ ಎರ್ನಾ ಯೂನಿವರ್ಸಿಟಿ ವೈಸ್ ಚಾನ್ಸಲರ್ಸ್ ಇದ್ದಾರೆ. ಅವರೆಲ್ಲರೂ ನಮ್ಮ ನಮ್ಮ ಯೂನಿವರ್ಸಿಟಿ ಅಭಿಪ್ರಾಯ ಸರಿಯೆಂದು ಪ್ರತಿಯೊಬ್ಬರೂ ಹೇಳುತ್ತಿದ್ದಾರೆ. ಹೀಗಾಗಿ ಯಾವುದಾದರೊಂದನ್ನು ಯೂನಿಫಾರಂ ಪ್ಯಾಟ್ರನ್ ಎಂಬುದಾಗಿ ಒಪ್ಪಿಕೊಳ್ಳುವುದಕ್ಕೆ ಕಷ್ಟವಿದೆ. ಅದಕ್ಕಾಗಿ ಈಗ ತಜ್ಞರ ಅಭಿಪ್ರಾಯವನ್ನು ಪಡೆಯಬೇಕಾಗಿದೆ. ಅದು ಸರ್ಕಾರದ ಪರಿಶೀಲನೆಯಲ್ಲಿದೆ.

ಶ್ರೀ ಬಿ. ಪಿ. ಗಂಗಾಧರ್.—ಮೈಸ್ ಚಾನ್ಸಲರುಗಳನ್ನು ನೇಮಕಮಾಡುವ ಬಗ್ಗೆ ಬಹಳವಾಗಿ ಅನ್ಯಾಯವಾಗಿದೆಯೆಂದು ನಾನು ಹೇಳುತ್ತಿದ್ದೇನೆ.

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಅಲ್ಲಿ ಅನ್ಯಾಯ ಏನೂ ಆಗಿಲ್ಲವೆಂದು ನಾನು ಹೇಳುತ್ತಿದ್ದೇನೆ.

Vacant Munsiff Court Building at Belgaum

50. Sri B. B. SAYANAK (Belgaum).—

Will the Minister for Law, Labour and Parliamentary Affairs be pleased to state :—

(*a*) whether a Munsiff Court building is vacant in Belgaum ;

(*b*) if so, since how many months ;

(*c*) when the Government intends to house the Court in that building ?

Sri K. PUTTASWAMY (Minister for Law, Labour and Parliamentary Affairs).—

(*a*) No.

(*b*) and (*c*) Does not arise in view of reply to clause (*a*).

Sri B. B. SAYANAK.—May I know whether the Second Additional Munsiff is not appointed by the Government since last six months ?

Sri K. PUTTASWAMY.—The question relates to the Munsiff Court Building. The hon. member is putting a question relating to appointment of Munsiff.

Sri B. B. SAYANAK.—This question is not properly worded by your office Sir ?

Mr. DEPUTY SPEAKER.—I will look into it.